3

# ಬೈಬಲಿನ ಬಗ್ಗೆ ಸರಿಯಾದ ಮನೋಭಾವನೆ

ಕ್ರಿಸ್ತನ ಸಭೆಗಳ ಹಾಗೂ ಸಭಾಪಂಗಡಗಳ (ಡಿನಾಮಿನೇಷನ್‌ಗಳ) ಮಧ್ಯದಲ್ಲಿ ಅನೇಕ ಭಿನ್ನತೆಗಳು ಕಂಡುಬರುತ್ತವೆ. ಈ ಸಮಯದಲ್ಲಿ ಅವೆಲ್ಲವುಗಳನ್ನು ಚರ್ಚಿಸುವುದು ನಮ್ಮ ಉದ್ದೇಶವಲ್ಲ. ಮೂಲವಾದ ಒಂದನ್ನು, ಇತರ ಎಲ್ಲವುಗಳಿಗಾಗಿ ಕಾರಣವಾದ ಒಂದನ್ನು - ಅಂದರೆ ಬೈಬಲಿನ ಬಗ್ಗೆ ನಮ್ಮ ಮನೋಭಾವನೆಯನ್ನು ಕುರಿತು ಚರ್ಚಿಸುತ್ತೇವೆ. ಪರಿಶುದ್ಧ ಬರಹಗಳ ಬಗ್ಗೆ ಯೋಗ್ಯ ಮನೋಭಾವನೆಯ ಕುರಿತು ಚರ್ಚಿಸುವದರಲ್ಲಿ ಮೂರು ಸೂತ್ರಗಳನ್ನು ನಾವು ಯೋಚಿಸತಕ್ಕದ್ದು. ಬೈಬಲಿನ ಪರಿಪೂರ್ಣತೆಯನ್ನು, ಅಧಿಕಾರವನ್ನು ಹಾಗೂ ಬಲವನ್ನು ನಾವು ಗುರುತಿಸುವಾಗ ದೇವರ ಲಿಖಿತ ಪ್ರಕಟಣೆಯ ಅರ್ಥವನ್ನು ಹಾಗೂ ಮುಖ್ಯತ್ವವನ್ನು ಗ್ರಹಿಸಿಕೊಳ್ಳುವೆವು.

## ಅದರ ಪರಿಪೂರ್ಣತೆ

ಬೈಬಲು ಮನುಷ್ಯನಿಗೆ ಪ್ರಕಟವಾದ ದೇವರ ಪೂರ್ಣ ಚಿತ್ತವಾಗಿದೆ. ದೇವರು ಮಾತಾಡಿದನು ಹಾಗೂ ಹೆಚ್ಚಿನ ಪ್ರಕಟನೆಗಳನ್ನು ಕುರಿತು ಮಾತಾಡುವದನ್ನು ಆತನು ಮುಕ್ತಾಯಗೊಳಿಸಿದ್ದಾನೆ. ಬೈಬಲು ಪರಿಪೂರ್ಣವಾಗಿದೆ ಎಂದು ಹೇಳುವ ಸಂಗತಿಯ ಅರ್ಥ ಯೋಹಾನನು ಪತ್ಮೊಸಿನ ಸೆರೆಯಲ್ಲಿದ್ದಾಗ ಅಂತಿಮ "ಆಮೆನ್" ಎಂದು ಬರೆದು ತನ್ನ ಲೇಖನಿಯನ್ನು ಪಕ್ಕದಲ್ಲಿಟ್ಟನು, ಮನುಷ್ಯನಿಗೆ ದೇವರ ಸಂದೇಶವು ಪೂರ್ತಿಗೊಳಿಸಲ್ಪಟ್ಟಿತು ಎಂದಾಗುವುದು.

ನಾವೀಗ ಉಪಯೋಗಿಸುವ ಮಾತಿನಂತೆ ಪರಿಶುದ್ಧ ಬರಹಗಳ ಪರಿಪೂರ್ಣತೆಯನ್ನು ಒಪ್ಪಿಕೊಳ್ಳದಂಥ ಸಮಯವು ಇತ್ತು. ಹಳೇ ಒಡಂಬಡಿಕೆಯ ಸಮಯಗಳಲ್ಲಿ, ದೇವರು ಕ್ರಮೇಣವಾಗಿ ತನ್ನ ಚಿತ್ತವನ್ನು,"ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ" (ಯೆಶಾಯ 28:10ಬಿ) ಪ್ರಕಟಿಸುತ್ತಿದ್ದನು.

ಹಳೇ ಒಡಂಬಡಿಕೆಯು ಪೂರ್ತಿಗೊಳಿಸಲ್ಪಟ್ಟಾಗ ಸಹ, ದೇವರ ಪ್ರಕಟನೆಯು ಪರಿಪೂರ್ಣವಾದದ್ದಾಗಿರಲಿಲ್ಲ. ಯೇಸುವು ಬಂದು ತನ್ನ ತಂದೆಯ ಚಿತ್ತವನ್ನು ಪ್ರಕಟಿಸುವದನ್ನು ಮುಂದುವರಿಸಿದನು. ಮೊದಲು ಕೊಡಲ್ಪಡದೇ ಇದ್ದ ಅನೇಕ ಬೋಧನೆಗಳನ್ನು ಪರಿಚಯ ಮಾಡಿಕೊಟ್ಟನು. "ಹೀಗೆ ಹೇಳಿದ್ದನ್ನು ನೀವು ಕೇಳಿದ್ದೀರಿ ... ಆದರೆ ನಾನು ನಿಮಗೆ ಹೇಳುತ್ತೇನೆ"; ಈ ಹೇಳಿಕೆಯು ಪರ್ವತ ಪ್ರಸಂಗದಲ್ಲಿ ಪುನಃ ಪುನಃ ಬರುತ್ತದೆ.

"ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು, ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ" (ಯೋಹಾನ 16:12) ಎಂದು ಯೇಸು ತನ್ನ ಭೂಲೋಕದ ಜೀವನದ ಅಂತ್ಯದಲ್ಲಿ ಹೇಳಿದನು. ಇನ್ನೂ ಹೆಚ್ಚಾದದ್ದು ಬರಲಿಕ್ಕಿತ್ತು. ಆ ಸಮಯದಲ್ಲಿ ದೇವರ

ಪ್ರಕಟಣೆಯು ಪರಿಪೂರ್ಣವಾದದ್ದಾಗಿರಲಿಲ್ಲ. ಯೇಸುವಿನ ಮುಂದಿನ ಹೇಳಿಕೆಯನ್ನು ಗಮನಿಸಿರಿ: "ಆದರೆ ಆತನು, ಸತ್ಯ ಸ್ವರೂಪಿಯಾದ ಆತ್ಮನು, ಬಂದಾಗ, ಆತನು ನಿಮ್ಮನ್ನು ಸರ್ವ ಸತ್ಯದೊಳಗೆ ನಡೆಸುವನು" (ವ. 13ಎ) ಅಪೊಸ್ತಲರ ಸಮಯದಲ್ಲಿ ಪ್ರಕಟನೆಯು ಪೂರ್ತಿಯಾಗುವದೆಂಬ ವಾಗ್ದಾನವು ಇಲ್ಲಿರುವುದು. ಪರಿಶುದ್ಧಾತ್ಮನು ಬಂದು, ಅವರನ್ನು "ಎಲ್ಲಾ" ("ಭಾಗವಾಗಿ" ಅಲ್ಲ) ಸತ್ಯದೊಳಗೆ ನಡಿಸುವನು.

ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ನಿಶ್ಚಿತವಾಗಿ ಬಂದನು (ಅಪೊಸ್ತಲರ ಕೃತ್ಯ 2:4). ಎಲ್ಲಾ ಸತ್ಯದಲ್ಲಿ ಆತನು ಅವರನ್ನು ನಡಿಸಿದನೋ? ಆತನು ನಡಿಸುವನೆಂದು ಯೇಸು ಹೇಳಿದನು. ಆತನು ಹಾಗೆ ಮಾಡಿದನೋ? ಯೇಸುವು ತನ್ನ ವಾಗ್ದಾನಕ್ಕೆ ಸತ್ಯವಾಗಿದ್ದರೆ, ಆಗ ಆತನು ಮಾಡಿದನು. ಈ ಕಾರಣದಿಂದಲೇ ಅನಂತರದಲ್ಲಿ ಪೇತ್ರನು ಹೀಗೆ ಹೇಳಿದನು: "ಆತನ ದಿವ್ಯ ಶಕ್ತಿಯು, ಜೀವಕ್ಕೂ ಭಕ್ತಿಗೂ ಬೇಕಾದದ್ದೆಲ್ಲವುಗಳನ್ನು ನಮಗೆ ದಯಪಾಲಿಸಿತು" (2 ಪೇತ್ರ 1:3) "ಪರಿಪೂರ್ಣವಾದ ನಿಯಮ" ಎಂದು ಯಾಕೋಬನು ಹೇಳಿದ್ದಾನೆ (ಯಾಕೋಬ 1:25) ತಾನು ಪ್ರಸಂಗಿಸಿದ ಸುವಾರ್ತೆಯನ್ನು ಬಿಟ್ಟು ಬೇರೆಯದನ್ನು ಪ್ರಸಂಗಿಸಲು ಧೈರ್ಯಗೊಳ್ಳುವ ಯಾರೇ ಆಗಲಿ ಅವರ ಮೇಲೆ ಪೌಲನು ಶಾಪವನ್ನು ಸಾರಿದನು (ಗಲಾತ್ಯ 1:8, 9).

ಹೌದು, ಅಪೊಸ್ತಲರು ಎಲ್ಲಾ ಸತ್ಯದೊಳಗೆ ನಡಿಸಲ್ಪಟ್ಟರು. ಯೇಸುವು ತನ್ನ ವಾಗ್ದಾನಕ್ಕೆ ಬದ್ಧನಾಗಿದ್ದನು. ದೇವರ ಪ್ರಕಟನೆಯು ಪೂರ್ತಿಗೊಳಿಸಲ್ಪಟ್ಟಿತು. ಈ ಸಂಗತಿಯ ಸ್ಥಾಪನೆಯು ಆ ಸಮಯದಿಂದ ಪ್ರಕಟನೆಯು ಕೊಡಲ್ಪಡುವುದಿಲ್ಲ ಎಂಬದನ್ನು ತೋರಿಸುತ್ತದೆ. ಇಂದು "ಪ್ರವಾದಿಗಳು" ಎಂದು ಕರೆಯಲ್ಪಡುವವರಿಂದ ಮಾಡಿದ ಘೋಷಣೆಗಳು ಸುಳ್ಳಾದವುಗಳೆಂದು ಅದು ಸಿದ್ಧಪಡಿಸುತ್ತದೆ.

## ಅದರ ಅಧಿಕಾರ

"ಅಧಿಕಾರಕ್ಕಾಗಿ ನಾವು ಯಾರ ಬಳಿಗೆ ಹೋಗೋಣ?" ಎಂಬ ಪ್ರಶ್ನೆಯು ಧಾರ್ಮಿಕ ಜಗತ್ತಿನಲ್ಲಿ ಬಹಳ ಸಮಯದಿಂದ ಪ್ರಾಮುಖ್ಯವಾದದ್ದಾಗಿದೆ. ಅನೇಕ ಉತ್ತರಗಳು ಕೊಡಲ್ಪಟ್ಟಿವೆ. ಅನೇಕ ಘೋಷಣೆಗಳು ಮಾಡಲ್ಪಟ್ಟಿವೆ. ನಮಗಾಗಿ ದೇವಾಲಯಕ್ಕೆ ಹೋಗಬೇಕೆಂದು ಕೆಲವರು ಹೇಳುತ್ತಾರೆ, ಆದರೆ ಬೈಬಲು ಎಲ್ಲಿಯೂ ಇದನ್ನು ಬೋಧಿಸುವದಿಲ್ಲ. ಪ್ರತಿಯೊಬ್ಬನೂ ತನ್ನ ಸ್ವಂತ ಮನಸ್ಸಾಕ್ಷಿಯನ್ನು ಅನುಸರಿಸಬೇಕೆಂದು ಇತರರು ಹೇಳುತ್ತಾರೆ. ಇದನ್ನಾದರೂ ಬೈಬಲು ನಮಗೆ ಬೋಧಿಸಲಿಲ್ಲ. ಅದರ ಬದಲಾಗಿ, ಇದನ್ನು ಮಾಡಬಾರದೆಂದು ಬೋಧಿಸುತ್ತದೆ (ಯೆರೆಮೀಯ 10:23; ಜ್ಞಾನೋಕ್ತಿ 14:12). ಇತರರು ಕೌನ್ಸಿಲಗಳಲ್ಲಿ, ಸಮ್ಮೇಳನಗಳಲ್ಲಿ ಹಾಗೂ ಸಿನೋಡಗಳಲ್ಲಿ ನಂಬುತ್ತಾರೆ. ಕೆಲವರು ಅಧಿಕಾರದ ಮಟ್ಟದಂತೆ ಸಾಂಪ್ರದಾಯವಾದಕ್ಕೆ ಅಂಟ್ಟಿಕೊಳುತ್ತಾರೆ. ಕ್ರಿಸ್ತನಿಂದ ಬಹಳ ಕಠಿಣವಾಗಿ ಖಂಡಿಸಲ್ಪಟ್ಟ ಆಚರಣೆಗಳಲ್ಲಿ ಇದು ಒಂದಾಗಿತ್ತು (ಮಾರ್ಕ 7:7-9).

ನಾವು ಯಾರ ಬಳಿಗೆ ಹೋಗೋಣ? ಅಧಿಕಾರವಿರುವ ಒಬ್ಬಾತನ ಬಳಿಗೆ ಅಂದರೆ ಯೇಸುವಿನ ಬಳಿಗೆ ನಾವು ಹೋಗತಕ್ಕದ್ದು (ಮತ್ತಾಯ 28:18). ಆತನಿಗೆ "ಎಲ್ಲಾ ಅಧಿಕಾರವಿರುವುದು." ಮೋಶೆಗಾಗಿ, ದಾವೀದನಿಗಾಗಿ, ಸ್ನಾನಿಕನಾದ ಯೋಹಾನನಿಗಾಗಿ, ಸಭೆಗಾಗಿ, ಕೌನ್ಸಿಲುಗಳಿಗಾಗಿ ಇಲ್ಲವೇ ಮನಸ್ಸಾಕ್ಷಿಗಾಗಿ ಅದು ಯಾವ ಅಧಿಕಾರವನ್ನು ಬಿಡುವುದಿಲ್ಲ. ಅರಸ ಯೇಸುವಿಗೆ ಎಲ್ಲಾ ಅಧಿಕಾರವಿದೆ.

ಇಂದು ದೇವರು ತನ್ನ ಮಗನ ಮುಖಾಂತರವಾಗಿ ನಮ್ಮೊಂದಿಗೆ ಮಾತಾಡುತ್ತಾನೆ

(ಇಬ್ರಿಯ 1:2). ಧರ್ಮದಲ್ಲಿ ಏನನ್ನಾದರೂ ತಿರ್ಮಾನಿಸಬೇಕಾಗಿದ್ದಾಗ ನಾವು ಯೇಸುವಿನ ಬಳಿಗೆ ಹೋಗತಕ್ಕದ್ದು. ನಾವು ಇತರ ಯಾವುದನ್ನೂ ಅವಲಂಭಿಸಲಾರೆವು. ನಾವು ಆತನ ಮಾತನ್ನು ಕೇಳತಕ್ಕದ್ದು ಹಾಗು ಅದು ಎಲ್ಲಾ ಧಾರ್ಮಿಕ ವಿಷಯಗಳಲ್ಲಿ ಅಂತ್ಯವಾದದ್ದಾಗಿರಬೇಕು.

ಅರಸನು ತನ್ನ ಚಿತ್ತವನ್ನು ಹೇಗೆ ತಿಳಿಯಪಡಿಸುವನು? ಕ್ರಿಸ್ತನು ನಮ್ಮೊಂದಿಗೆ ಹೇಗೆ ಮಾತಾಡುವನು? ತನ್ನ ರಾಯಭಾರಿಗಳ ಮುಖಾಂತರ (2 ಕೊರಿಂಥ 5:20). ಪೌಲನು ಮತ್ತು ಇತರ ಪ್ರೇರೇಪಿತ ಜನರು ರಾಯಭಾರಿಗಳಾಗಿದ್ದರು. ತಮ್ಮ ಅರಸನ ಪ್ರತಿನಿಧಿಗಳಾಗಿದ್ದರು. ಅವರು ಪರಿಶುದ್ಧಾತ್ಮನಿಂದ ತಮಗೆ ಕೊಡಲ್ಪಟ್ಟ ಕ್ರಿಸ್ತನ ವಾಕ್ಯವನ್ನು ಪ್ರಸಾರ ಮಾಡಿದರು (ಮತ್ತಾಯ 10:20). ಅವರು ಕ್ರಿಸ್ತನನ್ನು ಪ್ರತಿನಿಧೀಕರಿಸಿದರು (ಯೋಹಾನ 20:20-23; ಮತ್ತಾಯ 19:28). ನಾವು ಈಗಾಗಲೇ ನೋಡಿದಂತೆ ಅವರು ಎಲ್ಲಾ ಸತ್ಯಗಳಲ್ಲಿ ನಡಿಸಲ್ಪಟ್ಟರು. ನಮಗೆ ಅವರು ಕೊಟ್ಟ ಪರಿಶುದ್ಧ ಬರಹಗಳು ತಮಗೆ ತಾವೇ ಅಧಿಕಾರವನ್ನು ಘೋಷಿಸುವುದು, ಆಶ್ಚರ್ಯಕರವಾದದ್ದಾಗಿರುವದಿಲ್ಲ (2 ಯೋಹಾನ 9; ಗಲಾತ್ಯ 1:6-9; 1 ಪೇತ್ರ 4:11). "ದೇವರ ದೈವವಾಣಿಗಳಂತೆ" ನಾವು ಮಾತಾಡತಕ್ಕದ್ದು.

ಹೊಸ ಒಡಂಬಡಿಕೆಯನ್ನು ಮುಕ್ತಾಯಗೋಳಿಸುವ ಪತ್ರದಲ್ಲಿ - ಪುಸ್ತಕಕ್ಕೆ ಕೂಡಿಸುವ ಇಲ್ಲವೇ ಪುಸ್ತಕದಿಂದ ತೆಗೆದುಹಾಕುವದರ ವಿರುದ್ಧವಾಗಿ ಗಂಭೀರವಾಗಿ ಎಚ್ಚರಿಕೆ ಕೊಟ್ಟಾಗ ಯೋಹಾನನು ಹೊಸ ಒಡಂಬಡಿಕೆಯ ಬರಹಗಾರರ ಸಾಮಾನ್ಯ ಮನೋಭಾವನೆಯನ್ನು ಸೂಚಿಸಿದ್ದಾನೆ (ಪ್ರಕಟನೆ 22:18, 19). ಅವನು ಪ್ರಕಟನೆ ಗ್ರಂಥಕ್ಕೆ ಮಾತ್ರವೇ ಸಂಬಂಧಿಸಿದ್ದಾನೆ ಎಂದು ಕೆಲವರು ಹೇಳಿದ್ದಾರೆ. ಇದು ಸತ್ಯವಾಗಿದ್ದರೂ ಇದು ಇನ್ನೂ ಇಡೀ ಪರಿಶುದ್ಧ ಬರಹಗಳ ಮನೋಭಾವನೆಯಾಗಿದೆ. ಈ ಮನೋಭಾವನೆಯು ಬೈಬಲು ಮಾತಾಡುವಲ್ಲಿ ಮಾತಾಡುವದಕ್ಕೂ ಮೌನವಾಗಿರುವಲ್ಲಿ ಮೌನವಾಗಿರುವದಕ್ಕೂ ನಾವು ಪ್ರಯತ್ನಿಸುವದಕ್ಕೆ ಕಾರಣವಾಗುತ್ತದೆ. ಪರಿಶುದ್ಧ ಬರಹಗಳಿಗಾಗಿ ಯೋಗ್ಯ ಗೌರವವು ಅವು ಹೇಳುವಂಥದ್ದನ್ನು ಗೌರವಿಸುವದಕ್ಕಷ್ಟೇ ಅಲ್ಲ, ಆದರೆ ಅವುಗಳ ಮೌನತೆಯನ್ನು ಗೌರವಿಸುವದಕ್ಕೂ ನಮ್ಮನ್ನು ನಡಿಸುತ್ತದೆ. "ಪರಿಶುದ್ಧ ಬರಹಗಳು ಅದನ್ನು ಎಲ್ಲಿ ನಿರ್ಬಂಧಿಸುತ್ತವೆ?" ಎಂದು ನಾವು ಕೇಳುವದಿಲ್ಲ. ಆದರೆ "ಪರಿಶುದ್ದ ಬರಹಗಳು ಅದನ್ನು ಎಲ್ಲಿ ಬೋಧಿಸುತ್ತವೆ?" ಎಂದು ಕೇಳುತ್ತೇವೆ. ಈ ಸಂಗತಿಯನ್ನು, ಪರಿಶುದ್ಧ ಬರಹಗಳ ಅಧಿಕಾರವನ್ನು, ಸ್ಥಾಪಿಸುವಾದಂಥದ್ದು ನಾವು ಯಾವುದೇ ಇತರ ಮೂಲಕ್ಕೆ ಹೋಗಲಾರೆವು ಎಂಬುದನ್ನು ತೋರಿಸುತ್ತದೆ.

## ಅದರ ಬಲ

ಕೆಲವರು ವಾಕ್ಯದ ಪರಿಪೂರ್ಣತೆಯನ್ನು ಹಾಗೂ ಅಧಿಕಾರವನ್ನು ಅರಿತು ಕೊಳ್ಳದೇ ಹೋದದ್ದಕ್ಕೆ ಮುಖ್ಯ ಕಾರಣಗಳಲ್ಲಿ ಒಂದು ಅದರ ಬಲವನ್ನು ಅರ್ಥ ಮಾಡಿ ಕೊಳ್ಳದೇ ಹೋದದ್ದು ಅಗಿರುವುದು. ಅದನ್ನು ಕೆಲವರು "ಸತ್ತ ಪತ್ರ" ಎಂದು ಕರೆದಿರುವರು. ಇದಕ್ಕೆ ವ್ಯತಿರಿಕ್ತವಾಗಿ ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಇದನ್ನು "ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು" (4:12) ಎಂದು ಕರೆದಿದ್ದಾನೆ.

ದೇವರ ವಾಕ್ಯವು ಯಾವಾಗಲೂ ಬಲವಾದದ್ದು. ಅದು ಪೂರೈಸುವಂತೆ ಆತನು ಅಪೇಕ್ಷಿಸುವದನ್ನು ಪೂರೈಸಲು ಅದು ಶಕ್ತಿಯುಳ್ಳದ್ದು. ಜಗತ್ತುಗಳು ಅಸ್ತಿತ್ವದಲ್ಲಿ

ಬರುವಂತೆ ಆತನು ಮಾತಾಡಿದನು. ತನ್ನ ಬಲದ ವಾಕ್ಯದಿಂದ ಎಲ್ಲಾ ಸಂಗತಿಗಳನ್ನು ಆತನು ಮೇಲಕ್ಕೆತ್ತಿ ಹಿಡಿಯುವನು (ಇಬ್ರಿಯ 1:3), ಕ್ರಿಸ್ತನು ಮಾತಾಡಿದನು ಹಾಗೂ ಸತ್ತವರನ್ನು ಎಬ್ಬಿಸಿದನು. ಆತನು ಮಾತಾಡಿದನು ಹಾಗೂ ರೋಷವುಳ್ಳ ಸಮುದ್ರಗಾಳಿಯನ್ನು ಶಾಂತಗೊಳಿಸಿದನು.

ಮನುಷ್ಯನು ಬಾಯ್ದೆರೆ ಹೇಳಿಕೆಗಳಿಂದ ಹೆಚ್ಚಾಗಿ ಅವರ ಲಿಖಿತ ದಾಖಲೆಗಳನ್ನು ಹೆಚ್ಚು ಬಲವುಳ್ಳವುಗಳನ್ನಾಗಿಯೂ ಬಂಧಿಸುವಂಥವುಗಳನ್ನಾಗಿಯೂ ಯೋಚಿಸುತ್ತೇವೆ. ಆದರೆ ದೇವರ ಲಿಖಿತ ವಾಕ್ಯವು ನಿಜವಾಗಿಯೂ ಆತನ ಬಾಯ್ದೆರೆ ವಾಕ್ಯಕ್ಕಿಂತ ಕಡಿಮೆ ಬಲವುಳ್ಳವುಗಳಾಗಿರುವದಿಲ್ಲ. ಆತನ ಲಿಖಿತ ವಾಕ್ಯವು ಜಗತ್ತನ್ನು ಸೃಷ್ಟಿಸುವುದಿಲ್ಲ, ಹಾಗೂ ಅದು ಸತ್ತವರನ್ನು ಎಬ್ಬಿಸುವದಿಲ್ಲ: ಆದರೆ ಅದು ಅಂಥ ಉದ್ದೇಶಗಳಿಗಾಗಿ ಬರೆಯಲ್ಪಡಲಿಲ್ಲ. ಅದು ಆತ್ಮಗಳನ್ನು ರಕ್ಷಿಸಲು ಕೊಡಲ್ಪಟ್ಟಿತು (ರೋಮಾಪುರ 1:16; 1 ಕೋರಿಂಥ 15:1, 2; ಯಾಕೋಬ 1:21) ಸತ್ತವರನ್ನು ಎಬ್ಬಿಸುವ ಉದ್ದೇಶಕ್ಕಾಗಿ ದೇವರು ಮಾತಾಡಿದ ವಾಕ್ಯವು ಸತ್ತವರನ್ನು ಎಬ್ಬಿಸಿದರೆ ಆಗ ಆತ್ಮಗಳನ್ನು ರಕ್ಷಿಸುವ ಉದ್ದೇಶಕ್ಕಾಗಿ ಅತನು ಕೊಟ್ಟ ವಾಕ್ಯವು ಆತ್ಮಗಳನ್ನು ರಕ್ಷಿಸಬಲ್ಲದು.

ದೇವರ ವಾಕ್ಯವು ಬೆಳಕನ್ನೂ ತಿಳುವಳಿಕೆಯನ್ನೂ ಕೊಡುವುದು (ಕೀರ್ತನೆ 119:130). ಅದು ಹುಟ್ಟಿಸುತ್ತದೆ (ಯಾಕೋಬ 1:18), ಉಜ್ಜೀವನಗೊಳಿಸುತ್ತದೆ (ಕೀರ್ತನೆ 119:50). ಹಾಗೂ ಶುದ್ಧೀಕರಿಸುತ್ತದೆ (ಯೋಹಾನ 15:3; 1 ಪೇತ್ರ 1:22). ಅದು ರಕ್ಷಣೆಗಾಗಿ ದೇವರ ಶಕ್ತಿಯಾಗಿದೆ (ರೋಮಾಪುರ 1:16). ಹೌದು, ದೇವರ ವಾಕ್ಯವು ಮಾರ್ಪಡಿಸಬಲದ್ದು. ಅದು ಕ್ರೈಸ್ತರನ್ನಾಗಿ ಮಾಡಲು ದೇವರ ಶಕ್ತಿಯಾಗಿದೆ ನಾವು ಕ್ರೈಸ್ತರಾದ ನಂತರ, ನಮಗೆ ಆಹಾರ ಬೇಕು, ಆ ಆಹಾರವು ದೇವರ ವಾಕ್ಯವಾಗಿದೆ (1 ಪೇತ್ರ 2:1, 2). ನಿಜವಾಗಿ, ದೇವರ ವಾಕ್ಯವು ದೇವರ ಮಗುವನ್ನು ಸಕಲ ಸತ್ಕಾರ್ಯಕ್ಕೆ ಸನ್ನದ್ಧರಾಗುವಂತೆ ಮಾಡುವುದು (2 ತಿಮೋಥೆ 3:16, 17).

## ಮುಕ್ತಾಯ

ಜನರು ಯಾವಾಗಲೂ ದೇವರ ವಾಕ್ಯದೊಂದಿಗೆ ಅತೃಪ್ತರಾಗಿದ್ದಾರೆ. ಅವರು ಯಾವಾಗಲೂ ಬೇರೆ ಯಾವುದನ್ನಾದರೂ ಬಯಸುತ್ತಾರೆ. ಪಾತಾಳದೊಳಗಿನ ಮನುಷ್ಯನು ತನ್ನ ಸಹೋದರರನ್ನು ಎಚ್ಚರಿಸಲು ಸತ್ತವರೊಳಗಿಂದ ಸಂದೇಶವಾಹಕನು ಹೋಗ ಬೇಕೆಂದು ಬಯಸಿದನು (ಲೂಕ 16), "ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳು ಅವರಲ್ಲಿ ಇವೆ; ಅವುಗಳನ್ನು ಕೇಳಲಿ" (ಲೂಕ 16:29) ಎಂದು ಅಬ್ರಹಾಮನು ಉತ್ತರಕೊಟ್ಟನು. ಇಂದು ಮೋಶೆ ಹಾಗೂ ಪ್ರವಾದಿಗಳಿಗೆ ಕೂಡಿಸಿ, ನಮಗೆ ಕ್ರಿಸ್ತನೂ ಆಪೊಸ್ತಲರೂ ಇರುವರು. ಅವರ ಸಂದೇಶದಿಂದ ನಾವು ತೃಪ್ತರಾಗಿರತಕ್ಕದ್ದು. ಬೈಬಲು ಪರಿಪೂರ್ಣವಾದದ್ದಾಗಿರುವದರಿಂದ ಆಧುನಿಕ ದಿನದ "ಪ್ರಕಟಣೆಯನ್ನು" ನಾವು ತಿರಸ್ಕರಿಸತಕ್ಕದ್ದು. ಬೈಬಲು ನಮ್ಮ ಆಧಿಕಾರವಾಗಿದೆ. ಆದುದರಿಂದ ಮನುಷ್ಯರ ಬೋಧನೆಗಳನ್ನೂ ಆಜ್ಞೆಗಳನ್ನೂ ನಾವು ತಿರಸ್ಕರಿಸತಕ್ಕದ್ದು. ದೇವರ ವಾಕ್ಯವು ಬಲವುಳ್ಳದ್ದಾಗಿರುವದರಿಂದ, ನಾವು ಅದ್ಭುತವಾದದ್ದಕ್ಕಾಗಿ, ಹೇಳಲ್ಪಟ್ಟದ್ದಕ್ಕಿಂತ ಹೆಚ್ಚಾಗಿ ಉತ್ತಮವಾಗಿ ಅನುಭವಿಸಿದ್ದ ಮಾರ್ಪಡುವಿಕೆಯ ಸಿದ್ಧಾಂತಗಳಿಗಾಗಿ ನೋಡಬಾರದು. ಮಾರ್ಪಡುವಿಕೆಗಾಗಿ ಹೊಸ ಒಡಂಬಡಿಕೆಯ ವಿಧಾನಗಳನ್ನು ನಾವು ಹಿಡಿದು ಕೊಳ್ಳಬೇಕು.

ಮನಷ್ಯರ ಅಭಿಪ್ರಾಯಗಳೂ ಬೋಧನೆಗಳೂ ಆಕಾಶ, ಭೂಮಿಗಳೊಂದಿಗೆ ಅಳಿದು ಹೋಗುವವು: ಆದರೆ ವಾಕ್ಯವು ಅಳಿದು ಹೋಗುವದಿಲ್ಲ (2 ಪೇತ್ರ 3:10; ಮತ್ತಾಯ 24:35). ಅಳಿದು ಹೋಗುತ್ತಿರುವ ಸಂಗತಿಗಳ ಈ ದಿನಗಳಲ್ಲಿ, ಉಳಿಯುತ್ತಿರುವ

ಉಷ್ಣತೆಯೊಂದಿಗೆ ಮೂಲವಸ್ತುಗಳು ಕರಗಿ ಹೋಗುತ್ತಿರುವಾಗ, ಸಹಿಸಿಕೊಳ್ಳುತ್ತಿರುವ ದರೊಂದಿಗೆ ನಾವು ಲಂಗರು ಹಾಕಿಕೊಳ್ಳಬಹುದೆಂಬುದನ್ನು ತಿಳಿಯುವುದು ಎಷ್ಟೋ ಆದರಣೆಯುಳ್ಳದ್ದಾಗಿದೆಯಲ್ಲವೇ!

© 2009 Truth for Today